ಶ್ರೀ ಕೆ.ಜೆ. ಜಾರ್ಜ್:– ನಾನು ಈಗಾಗಲೇ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ, ಯಾವುದೇ ರೀತಿಯಲ್ಲಿ ಅದು ಸರ್ಕಾರದ ತೀರ್ಮಾನವಲ್ಲ. ಪೊಲೀಸ್ ಕಮೀಷನರ್‌ರವರು ಅವರ magisterial ಪವರ್ ಲಿಮಿಟ್‌ನಲ್ಲಿ ಅದನ್ನು ಮಾಡಿದ್ದಾರೆ. ಅದು ಸರ್ಕಾರದ ತೀರ್ಮಾನವಲ್ಲ. ಆದರೆ ಅವರು ಮಾಡಿರುವುದಕ್ಕೆ ಸರ್ಕಾರ ಬೆಂಬಲ ಕೊಡುತ್ತದೆ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 5ನೇ ಫೆಬ್ರವರಿ 2015ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

ಚುಕ್ಕೆ ರಹಿತ ಪ್ರಶ್ನೆಗಳಿಗೆ ಸದನದಲ್ಲಿ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅನುಬಂಧ–1

ಮನೆಗಳ ನಿರ್ಮಾಣ

160(303); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಬಾಗ)

ಅ) 2014–15ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಮಂಜೂರಾದ ಮನೆಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ;

ಇ) ನಿರ್ಮಿಸಲಾದ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆಯೇ; ಫಲಾನುಭವಿಗಳನ್ನು ಯಾವ ಮಾನದಂಡದಡಿ ಆಯ್ಕೆ ಮಾಡಲಾಗುವುದು;

ಈ) ನಿರ್ಮಿಸಿರುವ ಪ್ರತಿ ಮನೆಗೆ ತಗಲಿರುವ ಮೊತ್ತವೆಷ್ಟು? (ಸಂಪೂರ್ಣ ವಿವರ ನೀಡುವುದು)

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಬೆಳಗಾವಿ ನಗರದಲ್ಲಿ 2014–15ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಜೀವ್ ಅವಾಸ್ ಯೋಜನೆಯಡಿ 13 ಕೊಳಚೆ ಪ್ರದೇಶಗಳಲ್ಲಿ ಒಟ್ಟು 1873 ಮನೆಗಳನ್ನು ರೂ. 80.49 ಕೋಟಿಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಮಂಜೂರಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ ಸಂ.	ನಗರ:ಪಟ್ಟಣ	ಕೊಳಚೆ ಪ್ರದೇಶದ ಸಂಖ್ಯೆ	ಮಂಜೂರಾದ ಮನೆಗಳ ಸಂಖ್ಯೆ	ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)
1	ಬೆಳಗಾವಿ–ಪ್ಯಾಕೇಜ್–1	7	1044	45.50
2	ಬೆಳಗಾವಿ–ಪ್ಯಾಕೇಜ್–2	6	829	34.99
	ಒಟ್ಟು	**13**	**1873**	**80.49**

ಆ) ಮನೆಗಳನ್ನು ನಿರ್ಮಾಣ ಮಾಡಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಮೂಲಭೂತ ಸೌಲಭ್ಯಗಳೊಂದಿಗೆ ಎಲ್ಲಾ ಮನೆಗಳು ಪೂರ್ಣಗೊಂಡ ನಂತರ ಹಂಚಿಕೆ ಮಾಡಲಾಗುವುದು.

ಫಲಾನುಭವಿಗಳ ಆಯ್ಕೆ ಸ್ಥಳೀಯ ಸಂಸ್ಥೆಯದಾಗಿದ್ದು, ಫಲಾನುಭವಿಗಳ ಪೌರಾಡಳಿತ ನಿರ್ದೇಶನಾಲಯದ ಆಶಾ ಕಿರಣ ಮಾಹಿತಿಯ (ಎ.ಕೆ.ಎಂ) ಪಟ್ಟಿಯಲ್ಲಿ ಸೇರಿರಬೇಕು. ಹಾಗೂ ಅಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೂ ಸಹ ಅವಕಾಶವಿರುತ್ತದೆ.

ಸಾಮಾನ್ಯವಾಗಿ ಈ ಕೆಳಕಂಡ ಷರತ್ತುಗಳು ಅನ್ವಯಿಸುತ್ತದೆ.

1) ನಿವಾಸಿಯು ಘೋಷಿತ ಕೊಳಚೆ ಪ್ರದೇಶದ ನಿವಾಸಿಯಾಗಿದ್ದು, ಕಳೆದ 10 ವರ್ಷಗಳು ಸದರಿ ಕೊಳಚೆ ಪ್ರದೇಶದಲ್ಲಿ ವಾಸವಾಗಿರಬೇಕು.

2) ಘೋಷಿತ ಕೊಳಚೆ ಪ್ರದೇಶದಲ್ಲಿ ಮಂಡಳಿ ನಡೆಸಿದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಪಟ್ಟಿಯಲ್ಲಿರಬೇಕು.

3) ಘೋಷಿತ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವುದಕ್ಕೆ ಮತದಾರರ ಗುರುತು ಪತ್ರ ಹಾಗೂ ಆಹಾರ ಪಡಿತರ ಚೀಟಿ ಹೊಂದಿರಬೇಕು.

4) ಮಂಡಳಿವತಿಯಿಂದ ವಿತರಿಸಲಾದ ಗುರುತು ಪತ್ರ ಹೊಂದಿರಬೇಕು.

5) ನಿವಾಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು.

6) ಅಂಗವಿಕಲರಿಗೆ ಸಂಬಂಧಪಟ್ಟ ಇಲಾಖೆಯಿಂದ ನೀಡಿರುವ ಪ್ರಮಾಣ ಪತ್ರ ಹೊಂದಿರ ಬೇಕು.

7) ನಿವಾಸಿಯು ಯಾವುದೇ ಮನೆ / ನಿವೇಶನ ಹೊಂದಿಲ್ಲದ ಬಗ್ಗೆ ಪ್ರಮಾಣ ಪತ್ರ ನೀಡತಕ್ಕದ್ದು.

8) ಕೇಂದ್ರ/ರಾಜ್ಯ ಸರ್ಕಾರ ನಿಗಧಿಪಡಿಸಿರುವ ಫಲಾನುಭವಿಗಳ ವಂತಿಕೆಯನ್ನು ಪಾವತಿಸತಕ್ಕದ್ದು.

ಈ) ಸದರಿ ಯೋಜನೆಯಡಿ ನಿರ್ಮಿಸಲಾಗುವ ಪ್ರತಿ ಮನೆಯ ಘಟಕ ವೆಚ್ಚ ರೂ. 3,43,200/– ಗಳಾಗಿದ್ದು, ಪ್ರತಿ ಮನೆಯು ಒಂದು ಹಾಲ್, ಒಂದು ರೂಮ್, ಅಡಿಗೆ ಮನೆ ಹಾಗೂ ಪ್ರತ್ಯೇಕ ಸ್ನಾನದ ಮನೆ, ಶೌಚಾಲಯಗಳನ್ನೊಳಗೊಂಡಂತೆ 25 ಚದರ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ.